**1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**MVC**-597/2024 **PW**: 1

**ದಿಃ 01.08.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ವಕೀಲರಿಂದಃ**

ಈ ದಿನ ನಾನು ನನ್ನ ಅರ್ಜಿಗೆ ಸಂಬಂದಿಸಿದಂತೆ ಮುಂದುವರೆದು ದೋಷಾರೋಪಣಾ ಪಟ್ಟಿಯ ದೃಡೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ 3 ಎಂದು, ಗಾಯದ ಪ್ರಮಾಣ ಪತ್ರದ ದೃಡೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ 4 ಎಂದು, ಅಪರಾಧ ವಿವರ ನಮೂನೆಯ ದೃಡೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ 5 ಎಂದು, ವಾಹನ ಅಮಾನತ್ತು ಪಂಚನಾಮೆಯ ದೃಡೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ 6 ಎಂದು, ಎರಡು ಆದಾರ ಕಾರ್ಡಗಳ ದೃಡೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ 7 ಮತ್ತು 8 ಎಂದು, ಐ ಎಂ ವಿ ವರದಿಯ ದೃಡೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ 9 ಎಂದು, ಮುಚ್ಚಳಿಕೆ ಪತ್ರದ ದೃಡೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ 10 ಎಂದು, ಆರ್ ಸಿ ಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ 11 ಎಂದು, ಪಾಲಿಸಿ ಕಾಪಿಯ ದೃಡೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ 12 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 2 ನೇ ಎದುರುದಾರ ಪರ ಶ್ರೀ ಪಿ ಎಂ ಸಿ ವಕೀಲರಿಂದಃ**

**1.** ಅಪಘಾತವು ಮನಗೂಳಿ ಹೈವೇಯಲ್ಲಿ ಆಗಿರುತ್ತದೆ. ಸದರಿ ಅಪಘಾತವು ದಿನಾಂಕಃ31.01.2024 ರಂದು ಸಂಜೆಗೆ ಆಯಿತು. ಅಪಘಾತ ಯಾವ ಯಾವ ಗಾಡಿ ನಡುವೆ ಆಯಿತು ಎಂದರೆ ಸಾಕ್ಷಿ ಒಟ್ಟು ನಾನು ಗಾಡಿ ತೆಗೆದುಕೊಂಡು ಹೋಗಿ ಬಿದ್ದಿದ್ದೆ ಅಲ್ಲಿ ಏನಾಯಿತು ಎಂದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಆ ದಿನ ನಾನು ಹೊಂಡಾ ಶೈನ ಗಾಡಿಯನ್ನು ಚಾಲನೆ ಮಾಡಿಕೊಂಡು ಹೋಗುತ್ತಿದ್ದೆ ಎನ್ನುತ್ತಾರೆ. ದೂರನ್ನು ನನ್ನ ತಂದೆ ನೀಡಿರುತ್ತಾರೆ. ದೂರನ್ನು ನನ್ನ ತಂದೆ ಯಾವಾಗ ಕೊಟ್ಟಿರುತ್ತಾರೆಂದರೆ ಸಾಕ್ಷಿ ನೆನಪಿಲ್ಲ ಎನ್ನುತ್ತಾರೆ. ನಾನು ಚಾಲನೆ ಮಾಡುತ್ತಿದ್ದ ಗಾಡಿ ಕೆಎ-28 ಇತ್ತು ಮುಂದೆ ಹೇಳಲು ಆಗುವದಿಲ್ಲ ಎನ್ನುತ್ತಾರೆ. ಸದರಿ ಗಾಡಿಯು ಮಾಲೀಕರು ನನ್ನ ಕಾಕಾ ನಬೀಸಾಬ ಮಕಾನದಾರ ಇರುತ್ತಾರೆ. ಸದರಿ ಅಪಘಾತದ ದಿನ ನಾನು ಗಾಡಿಯನ್ನು ಮನಗೂಳಿಗೆ ತೆಗೆದುಕೊಂಡು ಹೋಗುತ್ತಿದ್ದೆ. ನನ್ನ

ತಂದೆ ರೈತ ಕೆಲಸ ಹಾಗೂ ಪ್ಲಂಬರ ಕೆಲಸ ಮಾಡುತ್ತಾರೆ. ಸದರಿಯವರು ಕೂಡ್ಲಿಗಿಯಲ್ಲಿ ವಾಸ ಇರುತ್ತಾರೆ.  ಅದು ನನ್ನ ಸ್ವಂತ ಊರು. ನನ್ನ ತಂದೆ ತಾಯಿ ಎಲ್ಲರೂ ಕೂಡಿ ಅಲ್ಲಿಯೇ ವಾಸ ಇರುತ್ತೇವೆ. ನನ್ನ ತಂದೆಗೆ ಐದು ಜನ ಮಕ್ಕಳು. ಒಬ್ಬ ಅಕ್ಕ ಇಬ್ಬರು ತಂಗಿಯರು ಹಾಗೂ ಒಬ್ಬ ತಮ್ಮ. ನಾನು ಎರಡನೇ ಮಗ ಇರುತ್ತೇನೆ. ಈಗ ನನ್ನ ವಯಸ್ಸು 27 ಇರುತ್ತದೆ. ನಾನು ಬಿ ಎಸ್ ಸಿ ಅಪ್ಟಿಮೆಟಿಕ ಮಾಡಿರುತ್ತೇನೆ. ನಾನು ಅಪಘಾತಕ್ಕಿಂತ ಮೊದಲು ಬ್ಲಡ್ ಸ್ಯಾಂಪಲ ಕಲೆಕ್ಟ ಮಾಡುತ್ತಿದ್ದೆ. ಎಲ್ಲಿ ಕೆಲಸ ಮಾಡುತ್ತಿದ್ದೀರಿ ಎಂದರೆ ಸಾಕ್ಷಿ ನೆನಪಿಲ್ಲ ಎನ್ನುತ್ತಾರೆ. ನಾನು ಕೆಲಸ ಮಾಡುತ್ತಿದ್ದೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಹಾಕಿರುತ್ತೇನೆ ಎನ್ನುತ್ತಾರೆ. ಅಲ್ಲಿ ಎಷ್ಟು ಸಂಬಳ ಕೊಡುತ್ತಿದ್ದರು ಎಂದರೆ ಸಾಕ್ಷಿ 15 ಸಾವಿರ ಎನ್ನುತ್ತಾರೆ. ಬ್ಲಡ್ ಸ್ಯಾಂಪಲ ಹೋಗುವದನ್ನು ಬಿಟ್ಟು ಬೇರೆ ಏನು ಕೆಲಸ ಮಾಡುತ್ತಿದ್ದೀರಿ ಎಂದರೆ ಸಾಕ್ಷಿ ಅಷ್ಟೆ ಎನ್ನುತ್ತಾರೆ. ನಾನು ಯಾವದೇ ಕೆಲಸ ಮಾಡುತ್ತಿರಲಿಲ್ಲ ಕೆಲಸ ಮಾಡುತ್ತಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸಾಕ್ಷಿ ಅದು ಸರಿಯಲ್ಲ ಎನ್ನುತ್ತಾರೆ. ನನ್ನ ತಂದೆಯವರು ಕೃಷಿ ಮಾಡುತ್ತಾರೆ. ನನ್ನ ತಂದೆಯವರೇ ಮನೆಯ ಎಲ್ಲಾ ಆಗುಹೋಗುಗಳ ಖರ್ಚನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ನಾನು ಕೂಡಾ ಅವರ ಮೇಲೆ ಅವಲಂಬಿತನಾಗಿದ್ದೆ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ.

2. ಸದರಿ ಅಪಘಾತದ ನಂತರ ನಾನು ಮೊದಲಿಗೆ ಬಿ ಎಂ ಪಿ ಆಸ್ಪತ್ರೆಗೆ ಹೋಗಿದ್ದೆ. ಸಾಕ್ಷಿ ಮುಂದುವರೆದು ಸರಕಾರಿ ಆಸ್ಪತ್ರೆ ಬಿಜಾಪೂರಕ್ಕೆ ಹೋಗಿದ್ದೆ ಎನ್ನುತ್ತಾರೆ. ಅಲ್ಲಿ ಚಿಕಿತ್ಸೆ ಪಡೆದೆ ಎಂದು ತೋರಿಸಲು ಯಾವದಾದರೂ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಹಾಜರುಪಡಿಸಿದ್ದೇನೆ ಎನ್ನುತ್ತಾರೆ. ಸಾಕ್ಷಿಗೆ ತಾನು ಹಾಜರುಪಡಿಸಿರುವ ದಾಖಲೆಗಳನ್ನು ತೋರಿಸಿ ಅದರಲ್ಲಿ ಆ ದಾಖಲೆ ಇದೆಯಾ ನೋಡಿ ಎಂದರೆ ಸಾಕ್ಷಿ ಅವುಗಳನ್ನು ನೋಡಿ ಇಲ್ಲ ಎನ್ನುತ್ತಾರೆ. ನಾನು ಈ ಬಗ್ಗೆ ಯೂವದೇ ದಾಖಲೆ ಹಾಜರುಪಡಿಸದಿದ್ದರೂ ಹಾಜರುಪಡಿಸಿದ್ದೇನೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸಾಕ್ಷಿ ನನಗೆ ನೆನಪಿಲ್ಲ ಎನ್ನುತ್ತಾರೆ. ಎಷ್ಟು ದಿವಸಗಳ ಕಾಲ ನೀವು ಬಿ ಎಂ ಪಿ ಆಸ್ಪತ್ರೆಯಲ್ಲಿ ಇದ್ದೀರಿ ಎಂದರೆ ಸಾಕ್ಷಿ ಒಂದು ತಿಂಗಳ ಕಾಲ ದಾಖಲಾಗಿದ್ದೆ ಎನ್ನುತ್ತಾರೆ. ನಾನು 1 ನೇ ತಾರೀಖನಂದು ಆಸ್ಪತ್ರೆಗೆ ದಾಖಲಾಗಿದ್ದು  ಎಲ್ಲಿಯವರೆಗೆ ಇದ್ದೀರಿ ಎಂದರೆ ಸಾಕ್ಷಿ ನೆನಪಿಲ್ಲ ಎನ್ನುತ್ತಾರೆ. ಸದರಿ ಅಪಘಾತದಿಂದ ನನಗೆ ಎಡಕತ್ತಿನ ಬಳಿ, ತಲೆ ಮೇಲ್ಭಾಗದಲ್ಲಿ ಮತ್ತು ಎಡಕೈ ಮೇಲೆ ಪೆಟ್ಟಾಗಿತ್ತು. ಆಸ್ಪತ್ರೆಯಲ್ಲಿ ಚಿಕಿತ್ಸೆ ಸಂಬಂದ ಖರ್ಚು 4 ರಿಂದ 5 ಲಕ್ಷ ರೂ ಗಳಾಗಿರುತ್ತದೆ. ಈ ಬಗ್ಗೆ ದಾಖಲಾತಿ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಹಾಜರುಪಡಿಸಿದ್ದೇನೆ ಎನ್ನುತ್ತಾರೆ. ಸಾಕ್ಷಿ ಮುಂದುವರೆದು ಮೀರಜ ಆಸ್ಪತ್ರೆಯಲ್ಲಿ ಕೂಡಾ ತೋರಿಸಿದ್ದೇನೆ ಎನ್ನುತ್ತಾರೆ. ಈ ಬಗ್ಗೆ ಸಾಕ್ಷಿಗೆ ತಾನು ಹಾಜರುಪಡಿಸಿರುವ ದಾಖಲೆಗಳನ್ನು ತೋರಿಸಿ ಕೇಳಲಾಗಿ ಸಾಕ್ಷಿ ಅವುಗಳನ್ನು ನೋಡಿ ಅದರಲ್ಲಿ ಇಲ್ಲ ಎನ್ನುತ್ತಾರೆ. ನಾನು ಯಾವದೇ ದಾಖಲೆಗಳನ್ನು ಹಾಜರುಪಡಿಸದೇ

ಹಾಜರುಪಡಿಸಿದ್ದೇನೆಂದು ಸುಳ್ಳು ಹೇಳುತ್ತಿದ್ದೇದರೆ ಸಾಕ್ಷಿ ಬಿಲ್ಲುಗಳು ಬಹಳ ಇವೆ ಎನ್ನುತ್ತಾರೆ. ಕೇವಲ ಪರಿಹಾರ ಪಡೆಯುವ ಉದ್ದೇಶದಿಂದ ನಾನು ಇಷ್ಟು ಖರ್ಚಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸಾಕ್ಷಿ ಅದು ಸರಿಯಲ್ಲ ಎನ್ನುತ್ತಾರೆ. ಆಸ್ಪತ್ರೆಯಿಂದ ಡಿಸ್ಚಾರ್ಜ ಅಗುವ ಸಮಯದಲ್ಲಿ ನಾನು ಸಂಪೂರ್ಣ ಹುಷಾರಾಗಿದ್ದೆ ಎಂದರೆ ಸಾಕ್ಷಿ ನಾನು ಆ ಸಮಯದಲ್ಲಿ ಹುಚ್ಚನಾಗಿದ್ದೆ ಆ ನಂತರ ಮನೆಗೆ ಬಂದು 15 ದಿನಗಳ ಕಾಲ ಇದ್ದು ಮತ್ತೆ ಮೀರಜ ಆಸ್ಪತ್ರೆಗೆ ದಾಖಲಾದ ಮೇಲೆ ನನಗೆ ಸ್ವಲ್ಪ ಆರಾಮವಾಗಿದೆ ಎನ್ನುತ್ತಾರೆ. ಈ ಬಗ್ಗೆ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ನೆನಪಿಲ್ಲ ಎನ್ನುತ್ತಾರೆ. ನನಗೆ ಎಲ್ಲಾ ವಿಷಯ ನೆನಪಿದ್ದರೂ ಕೂಡಾ ನಾನು ಈ ರೀತಿ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸದರಿ ಅಪಘಾತದಿಂದ ನನಗೆ ಈ ರೀತಿ ಆದದ್ದಲ್ಲ ಬೇರೆ ರೀತಿಯಿಂದ ಗಾಯ ಪಡಿಸಿಕೊಂಡು ದಾಖಲಾಗಿದ್ದೆ ಎಂದರೆ ಸಾಕ್ಷಿ ಸುಳ್ಳು ಎನ್ನುತ್ತಾರೆ. ಆ ಕಾರಣಕ್ಕಾಗಿ ನಾನು ಅದಕ್ಕೆ ಸಂಬಂದಿಸಿದ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ಸರಿಯಲ್ಲ ಎನ್ನುತ್ತಾರೆ.

3. ಸದರಿ ಅಪಘಾತದ ನಂತರ ನನ್ನ ತಂದೆಯವರು ಕೊಟ್ಟ ದೂರಿನಲ್ಲಿ ನನ್ನ ಮಗ ಅವಸರವಾಗಿ ಹೋಗುವಾಗ ರಸ್ತೆ ಮದ್ಯದಲ್ಲಿರುವ ಡಿವೈಡರಗೆ ಡಿಕ್ಕಿ ಹೊಡೆದು ಬಿದ್ದೀರುತ್ತಾನೆಂದು ಹೇಳಿರುತ್ತಾರೆಂದರೆ ಸಾಕ್ಷಿ ನನ್ನ ತಂದೆ ಆ ರೀತಿ ತಪ್ಪು ಹೇಳಿರುತ್ತಾರೆ ಎನ್ನುತ್ತಾರೆ. ಹಾಗಾದರೆ ಅಪಘಾತ ಈ ರೀತಿ ಆಗಿಲ್ಲ ಎಂದರೆ ಸಾಕ್ಷಿ ಅಪಘಾತವಾಗಿದೆ ಆದರೆ ನಾನು ಸ್ವಂತವಾಗಿ ಬಿದ್ದಿರುತ್ತೇನೆ ಎನ್ನುವದು ತಪ್ಪು ಎನ್ನುತ್ತಾರೆ. ನಾನು ಆ ರೀತಿ ಬಿದ್ದಿರುವ ಕಾರಣ ನನ್ನ ಮೇಲೆ ಕ್ರಮ ಕೈಗೊಳ್ಳಿ ಎಂದು ನನ್ನ ತಂದೆ ದೂರು ಕೊಟ್ಟಿರುತ್ತಾರೆಂದರೆ ಸಾಕ್ಷಿ ಮೊದಲು ನನ್ನ ತಂದೆ ಬೇಡ ಎಂದು ಬಿಟ್ಟಿದ್ದರು ನಂತರ ವಕೀಲರು ಬಂದು ಸರಕಾರ ನಿನಗೆ ಸಹಾಯ ಮಾಡುತ್ತದೆ ಕೇಸು ಕೊಡಿ ಎಂದು ಹೇಳಿದರು ಎನ್ನುತ್ತಾರೆ. ನಿಮ್ಮ ತಂದೆಯವರು ನೀಡಿದ ದೂರಿನ ಮೇಲೆ ಕಾನೂನು ಕ್ರಮ ಕೈಕೊಳ್ಳಲು ಹೋಗಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಸದರಿ ಅಪಘಾತ ನನ್ನ ತಪ್ಪಿನಿಂದಾಗಿದೆ ಎಂದು ಪೊಲೀಸರು ತನಿಖೆ ಮಾಡಿ ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತಾರೆಂದರೆ ಸಾಕ್ಷಿ ಸಲ್ಲಿಸಿದ್ದಾರೆ ಆದರೆ ನಾನು ಸ್ವಂತವಾಗಿ ಬಿದ್ದಿದ್ದೇನೆಂಬುದು ಅದು ತಪ್ಪು ಇದೆ ಎನ್ನುತ್ತಾರೆ. ನಿಪಿ 3 ನ್ನು ನಾನು ಓದಿರುವದಿಲ್ಲ. ದೋಷಾರೋಪಣಾ ಪಟ್ಟಿಯ 17ನೇ ಪ್ಯಾರಾದಲ್ಲಿ ಕಾಲಂ ನಂಃ12 ರಲ್ಲಿ ನಮೂದಿಸಿರುವ ವಿಷಯವು ಈ ರೀತಿ ಇದೆ ಎಂದರೆ ಸಾಕ್ಷಿ ನಾನು ಜೋರಾಗಿ ಹೋಗಿದ್ದೇನೆಂಬುದು ಸುಳ್ಳು ಆದರೆ ಬಿದ್ದಿದ್ದೆ ಹೇಗೆ ಆಯಿತು ಎಂಬುದು ನನಗೆ ನೆನಪಿಲ್ಲ ಎನ್ನುತ್ತಾರೆ. ಸದರಿ ಅಪಘಾತವು ನನ್ನ ತಪ್ಪಿನಿಂದಲೇ ಆಗಿದೆ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಕ್ರಿಮಿನಲ್ಲ ನ್ಯಾಯಾಲಯದಲ್ಲಿ ನನ್ನ ಕ್ರಿಮಿನಲ್ಲ ಕೇಸು ಇನ್ನೂ ಚಾಲ್ತಿಯಲ್ಲಿದೆ ಇದೆ ಎಂದರೆ ಸಾಕ್ಷಿ ಅದು ಗೊತ್ತಿಲ್ಲ ಎನ್ನುತ್ತಾರೆ. ಅಪಘಾತವು ನನ್ನ ತಪ್ಪಿನಿಂದಾದ ಕಾರಣ ಪರಿಹಾರ ಪಡೆಯಲು ನಾನು

ಅರ್ಹನಲ್ಲ ಎಂದರೆ ಸಾಕ್ಷಿ ನೆನಪಿಲ್ಲ ಎನ್ನುತ್ತಾರೆ. ಕಾರಣ 2 ನೇ ಎದುರುದಾರರು ನನಗೆ ಪರಿಹಾರ ಕೊಡಲು ಬಾದ್ಯಸ್ಥರಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

**1 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**